ಶ್ರೀ ಬಿ. ಎರ್. ಗೌಡ.—ಸರ್ಕಾರಕ್ಕೆ ಯಾವ ಯೋಜನೆಯೂ ಬಂದಿಲ್ಲ. ಇಂತಹ ಒಂದು ನಿರ್ಣಯವನ್ನು ರಾಯಚೂರಿನ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಮಾಡಿ ಸರ್ಕಾರಕ್ಕೆ ಕಳಿಸಿದ್ದರು. ಅದನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕಳಿಸಿಕೊಟ್ಟಿದ್ದೇವೆ. ಈ ಯೋಜನೆಯನ್ನು ಕೈಗೊಳ್ಳುವುದಕ್ಕೆ ಮುಂಚೆ ಭೂಗರ್ಭ ಶಾಸ್ತ್ರಜ್ಞರು ಭೂಗರ್ಭದಲ್ಲಿ ಎಷ್ಟು ನೀರು ಇದೆ ಎಂಬುದನ್ನು ಅಂದಾಜು ಮಾಡಬೇಕಾಗಿದೆ. ಅದಕ್ಕಾಗಿ ಬಳ್ಳಾರಿ ಜಿಲ್ಲೆಯ ಭೂಗರ್ಭ ಶಾಸ್ತ್ರಜ್ಞರನ್ನು ಕೋರಲಾಗಿದೆ. ಅವರಿಂದ ಮಾಹಿತಿ ಬಂದಮೇಲೆ ವಿಚಾರ ಮಾಡುತ್ತೇವೆ.

ಶ್ರೀ ಕೆ. ಸಂಗನಗೌಡ.—ರಾಯಚೂರಿನ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಈ ವಿಚಾರದಲ್ಲಿ ನಿರ್ಣಯ ಮಾಡಿ ಎಷ್ಟು ದಿವಸವಾಯಿತು. ಬಳ್ಳಾರಿ ಜಿಲ್ಲೆಯ ಭೂಗರ್ಭಶಾಸ್ತ್ರಜ್ಞರು ಸರ್ವೆ ಮಾಡುತ್ತಿದ್ದಾರೆಂದು ಹೇಳಿದಿರಿ. ಆ ಸರ್ವೆ ಕೆಲಸ ಯಾವ ಮಟ್ಟದಲ್ಲಿ ಇದೆ. ನನಗೆ ತಿಳಿದಮಟ್ಟಿಗೆ ಅವರು ಸರ್ವೆ ಮಾಡಲು ಯಾವ ತಾಲ್ಲೂಕ್‌ಗೂ ಬಂದಿಲ್ಲ. ಬಂದಿದ್ದರೆ ಯಾವ ಯಾವ ತಾಲ್ಲೂಕ್‌ಗಳಿಗೆ ಬಂದಿದ್ದರು ಎಂಬುದು ತಿಳಿಸಿ.

ಶ್ರೀ ಬಿ. ಎರ್. ಗೌಡ.—ರಾಯಚೂರಿನ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಯಾವ ತಾರೀಖು ನಿರ್ಣಯ ಕೈಗೊಂಡರು ಎಂಬುದು ನನಗೆ ಗೊತ್ತಿಲ್ಲ. ಭೂಗರ್ಭ ಶಾಸ್ತ್ರಜ್ಞರು ತಮ್ಮ ವರದಿಯನ್ನು ಮಾರ್ಚ್ ಕೊನೆಯೊಳಗೆ ಕೊಡುತ್ತಾರೆಂಬ ವಿಷಯ ಗೊತ್ತಿದೆ. ಅವರ ಕಾರ್ಯ ಜಟು ವಟಿಕೆಯ ಬಗ್ಗೆ ನನಗೆ ಗೊತ್ತಿಲ್ಲ.

2-30 P.M.

ಶ್ರೀ ಸದಾಶಿವಪ್ಪ ವಾಟೀಲ್.—ಕಷ್ಟಗಿ, ಯರ್‌ಬುರ್ಗಾ ಮತ್ತು ಲಿಂಗಸುಗೂರು ಇವು ಮೂರನ್ನು ಮಾತ್ರ ರಾಯಚೂರು ಡೆವಲಪ್‌ಮೆಂಟು ಕೌನ್ಸಿರ್‌ನಲ್ಲಿ ತೆಗೆದುಕೊಳ್ಳಬೇಕು ಎಂದು ಯಾವ ಆಧಾರದ ಮೇಲೆ ಹೇಳಿದರು ಮತ್ತು ಯಾವ ಆಧಾರದಮೇಲೆ ದೇವದುರ್ಗವನ್ನು ಬಿಟ್ಟರು?

ಶ್ರೀ ಬಿ. ಎರ್. ಗೌಡ ಡೆವಲಪ್‌ಮೆಂಟು ಕೌನ್ಸಿರ್‌ನವರು ಮಾಡಿ ಕಳುಹಿಸಿರುವ ಸೂಚನೆ ಮಾತ್ರ ರೆಸಲ್ಯೂಷನ್ ಮಾಡಿದ್ದಾರೆ. ಇದನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ.

ಶ್ರೀ ಇ. ಪುಂಡಲೀಕಪ್ಪ.—ಬಳ್ಳಾರಿ ಜಿಲ್ಲೆಯಲ್ಲಿ ಭೂಗರ್ಭ ಇಲಾಖೆ ಅಧಿಕಾರಿಗಳು ಒಬ್ಬರೇ ಇರುವುದರಿಂದ ಇವರು ನಾಲ್ಕೂ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡಲು ವರ್ಷಗಟ್ಟಲೆಕಾಲ ಬೇಕಾಗುತ್ತದೆ. ಇದಕ್ಕಾಗಿ ಇಲ್ಲಿ ಸ್ಪೆಷರ್ ಆಗಿ ಏನಾದರೂ ಕಳುಹಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಎರ್. ಗೌಡ.—ಜಿಯಾಲಜಿಕರ್ ಡೈರಕ್ಟರಿಗೆ ಸ್ಪೆಷರ್ ಆಗಿ ಬರೆದು ಪುನಃ ಅವರಿಗೆ ಒತ್ತಿ ಹೇಳುತ್ತೇವೆ.

ಶ್ರೀ ಬಾಪೂಗೌಡ.—ನಮ್ಮ ರಾಜ್ಯದಲ್ಲಿ ಗುಲ್ಬರ್ಗಾ ಬೀದರ್ ಹಾಗೂ ರಾಯಚೂರಿನಲ್ಲಿ ಎಲ್ಲೆಲ್ಲಿ ನೀರಿನ ಅಭಾವ ಇದೆಯೋ, ಅಲ್ಲಿಗೆ ಸರಿಯಾದ ಒಂದು ಸ್ಕೀಂಗಳನ್ನು ಹಾಕಿಕೊಂಡು ಇದರ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಬಿ. ಎರ್. ಗೌಡ.—ಇದನ್ನು ಮುಂದೆ ಯೋಚನೆ ಮಾಡಬಹುದು.

## Irrigation Wells in Chickmagalur District

525. **Sri M. MALLAPPA** (Birur).—

Will the Minister for Revenue be pleased to state.—

(*a*) the number of irrigation wells sanctioned for the Chickmagalur District under Famine Relief works (Taluk-wise information may be given);

(*b*) the number of wells completed and the amount of expenditure incurred;

(*c*) how long the Government propose to continue this scheme so as to provide additional facilities to the ryots to develop agriculture?

Sri H. V. KOUJALGI (Minister for Revenue).—

| (a) *Taluk* | | *No. sanctioned* |
|---|---|---|
| Tarikere | ... | 12 |
| Chickmagalur | ... | 4 |
| Kadur | ... | 9 |
| | | 25 |

(b) Number completed ... Nil.
Reported expenditure Rs. 27,923-55.

(c) No time limit has been prescribed. The Deputy Commissioners have to keep ready a programme of construction of irrigation well initially from funds under "64 Faminine Relief" and to review this programme every year.

ಶ್ರೀ ಎಂ. ಮಲ್ಲಪ್ಪ.—ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡರೆ ಅನೇಕ ಜನರಿಗೆ ಕೆಲಸಗಳು ಸಿಗುತ್ತಿತ್ತು. ಆದರೆ ಕೆಲವು ಕಡೆಗಳಲ್ಲಿ ನೂರಾರು ಕೇಸುಗಳು ಕೆಲಸ ಆಗದೆ ಹಾಗೇ ಉಳಿದಿವೆ. ಇದಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ಸರಕಾರ ಬೇಗನೆ ಹಣ ಒದಗಿಸಿ ಇಲ್ಲ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಇವನ್ನು ಪರ್ಮನೆಂಟು ಸ್ಕೀಂ ಮಾಡಿದಾಗ ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದು.

ಶ್ರೀ ಹಂಪಿ ಶಿವಣ್ಣ.—ತರಿಕೆರೆಯಲ್ಲಿ 12 ಬಾವಿಗಳನ್ನು ಮಂಜೂರು ಮಾಡಿದೆ ಎಂದು ಉತ್ತರದಲ್ಲಿದೆ. ಇವು ಪೂರ್ಣವಾದ ಬಾವಿಗಳಲ್ಲ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ ?

ಶ್ರೀ ಹೆಚ್. ವಿ. ಕೌಜಲಗಿ.—ಯಾವ ಯಾವ ಬಾವಿಗಳು ಮಂಜೂರಾಗಿವೆ ಎನ್ನುವುದನ್ನು ಅಲ್ಲಿರುವ ಕಮಿಟಿಯವರೇ ಮಾಡಿ ಕಳುಹಿಸುತ್ತಾರೆ.

ಶ್ರೀ ಬಿ. ಪಿ. ಗಂಗಾಧರ್.—ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದಲ್ಲ ಒಂದು ಕಡೆ ಕ್ಷಾಮ ಬರುತ್ತಲೇ ಇರುತ್ತದೆ. ಇದರ ಬಗ್ಗೆ ರಾಜ್ಯದಾದ್ಯಂತ ಎಲ್ಲೆಲ್ಲ ಕ್ಷಾಮ ಬರುತ್ತದೆ ಎನ್ನುವುದನ್ನು ಪಟ್ಟಿ ಮಾಡಿ ಅದಕ್ಕೆ ತಕ್ಕ ಹಾಗೆ ಶಾಶ್ವತವಾಗಿ ಪರ್ಮನೆಂಟ್ ರಿಲೀಫ್ ಮೆಷರ್ಸ್ ತೆಗೆದುಕೊಂಡರೆ ಸಾಕಷ್ಟು ಸೌಕರ್ಯಗಳು ಸಿಗುವುದಿಲ್ಲವೇ ? ಹಾಗೆ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಸರಕಾರದ ಉದ್ದೇಶವೂ ಇದೆ. ಅದರ ಬಗ್ಗೆ ಮುಂದೆ ಏರ್ಪಾಡು ಮಾಡಬೇಕೆಂದು ಇದೆ. ಮತ್ತು ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಇದಕ್ಕೆ 20 ಕೋಟಿ ರೂಪಯಿಗಳ ಒಂದು ಯೋಜನೆ ಮಾಡಿ ಕೇಂದ್ರ ಸರಕಾರಕ್ಕೂ ಕೂಡ ಕಳುಹಿಸಲಾಗಿದೆ.

ಶ್ರೀ ಎಂ. ಮಲ್ಲಪ್ಪ.—ಬಾವಿಗಳನ್ನು ಪೂರ್ತಿ ಮಾಡಲು ಇದರಲ್ಲಿ ಹಣ ಇಲ್ಲ ಎಂದು ಹೇಳುತ್ತೀರಿ, ಸರಕಾರ ಎಲ್ಲ ಅರ್ಧಕೆಲಸಗಳು ಆಗಿ ಬಾವಿ ನಿಂತಿದೆಯೋ ಅದಕ್ಕೆ ಬೇಗ ಹಣ ಕೊಟ್ಟು ಪೂರ್ತಿ ಮಾಡಲು ಆಗುವುದಿಲ್ಲವೇ ?

ಶ್ರೀ ವಿ. ಕೌಜಲಗಿ.—ಈಗ ಕೊಟ್ಟ ಹಣವನ್ನೇ ಪೂರ್ತಿಯಾಗಿ ಉಪಯೋಗಮಾಡಿಲ್ಲ. ಇನ್ನು ಹೆಚ್ಚು ಹಣ ಕೊಡುವುದು ಎಂದರೆ ಹೇಗೆ ?

Mr. SPEAKER.—Since the Hon. Chief Minister is not here, at his special request question nos. 368, 527, 599, 617 and 847 are held over.

Sri K. H. PATIL.—Is it possible to extend the same facility to the Members also ? After all, the Chief Minister is attending the Party meeting at Delhi. But we will be having more urgent and more important business than the Chief Minister. Will the facility given to the Chief Minister, be extended to us also ?

Mr. SPEAKER.—I shall consider that,